ಬೀಜವನ್ನೂ ಸೇರಿಸಿ ಪ್ರಮಾಣವನ್ನು ಜಾಸ್ತಿ ಮಾಡಿ ಮಾರಾಟ ಮಾಡುವ ಜಾಲವೂ ಇದೆ. ಸಂಬಾರ ವಸ್ತುಗಳಲ್ಲಿ ಒಂದಾದ ಈ ಕಾಳುಮೆಣಸಿನ ಪುಡಿಗೆ ಬೇಡಿಕೆ ಹೆಚ್ಚಾಗಿದೆ. ಕಾಳುಮೆಣಸನ್ನು ಬೇರ್ಪಡಿಸಿದ ಬಳಿಕ ಉಳಿಯುವ ಗೊಂಚಲ ಕಡ್ಡಿಗೂ ಬೇಡಿಕೆ ಇದ್ದು, ದಂಧೆಯಲ್ಲಿ ತೊಡಗಿರುವವರು ಕಾಳುಮೆಣಸಿನ ಜತೆಗೆ ಕಡ್ಡಿಯನ್ನೂ ಖರೀದಿಸುತ್ತಾರೆ. ಕಾಳುಮೆಣಸನ್ನು ಪುಡಿ ಮಾಡಿ ಮಾರಾಟ ಮಾಡುವವರು ಈ ಗೊಂಚಲ ಕಡ್ಡಿಯನ್ನೂ ಪುಡಿ ಮಾಡಿ ಅದಕ್ಕೆ ಸ್ವಲ್ಪ ಪ್ರಮಾಣದಲ್ಲಿ ಕಾಳುಮೆಣಸನ್ನು ಸೇರಿಸುತ್ತಾರೆ. ಇಂಥ ಪುಡಿಗಳು ಖಾರ ಇಲ್ಲದೆ ಇದ್ದರೂ ಅವುಗಳಲ್ಲಿ ಕಾಳುಮೆಣಸಿನಂತೆ ಘಮ ಇರುತ್ತದೆ. ಮೇಲ್ನೋಟಕ್ಕೆ ಗೊತ್ತಾಗದೆ ಇದ್ದರೂ ರುಚಿಯಲ್ಲಿ ಪತ್ತೆ ಮಾಡಬಹುದು. ಹೀಗೆ ಕಾಫಿಪುಡಿಗೂ ಮರದ ಹೊಟ್ಟು, ಮಣ್ಣನ್ನು ಕಲಬೆರಕೆ ಮಾಡಿ ಮಾರಾಟ ಮಾಡುವ ಜಾಲವುಂಟು. ಟೀ ಪುಡಿಗೆ ಮರದ ಹೊಟ್ಟು, ಹುಣಸೆ ಬೀಜ ಹಾಗೂ ಅದರ ಬೀಜದ ಸಿಪ್ಪೆಯನ್ನು ಪುಡಿ ಮಾಡಿ ಕಲಬೆರಕೆ ಮಾಡಲಾಗುತ್ತಿದೆ. ಮೈದಾ ಹಿಟ್ಟಿನಿಂದ ಗೋಡಂಬಿಯಂತೆ ಕಾಣುವ ಉತ್ಪನ್ನಗಳನ್ನು ತಯಾರಿಸಿ ಗೋಡಂಬಿಯ ಜೊತೆಗೆ ಮಾರಾಟ ಮಾಡುವುದೂ ಸಾಧ್ಯ ಎಂದಾದರೆ, ಒಳ್ಳೆಯ ಆಹಾರವನ್ನು ದುರ್ಬೀನು ಹಾಕಿ ಹುಡುಕುವ ಕಾಲ ಎದುರಾಗಿದೆ ಅನಿಸುತ್ತದೆ.

ಕಲಬೆರಕೆ ಆಹಾರದ ಸಮಸ್ಯೆಗಳನ್ನು ಸಾಲು ಸಾಲಾಗಿ ಹೇಳುತ್ತಾ ಹೋಗಬಹುದು. ಈ ವಿಷವ್ಯೂಹವನ್ನು ದಾಟುವುದು ಹೇಗೆ? ಸದ್ಯಕ್ಕೆ ನಮ್ಮ ಮುಂದಿರುವುದು ಒಂದೇ ದಾರಿ: ನಮ್ಮ ಅಡುಗೆಮನೆಗೆ ಒಳ್ಳೆಯ ಆಹಾರ ಬರಬೇಕಾದರೆ ಮೊದಲು ನಮ್ಮ ಆಲೋಚನಾ ಪ್ರಕ್ರಿಯೆಯು ದೃಢವಾಗಿರಬೇಕು. ಆಹಾರ ಪದಾರ್ಥಗಳು ನಮ್ಮ ಅಡುಗೆಮನೆಗೆ ಬರುವ ಮುನ್ನ ದಾಟಬೇಕಾದ ಕೃಷಿ, ಕೊಯ್ಲು ಮತ್ತು ಹಸನು ಮಾಡುವ ಕ್ಷೇತ್ರಗಳಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ನಮ್ಮ ಚಿಂತನೆ ಹರಿಯಬೇಕು.

## ರೈತನ ಪರಾವಲಂಬಿತನವೇ ಎಲ್ಲ ಸಮಸ್ಯೆಗಳ ಮೂಲ

ಯಾವ ರೈತನ ಮನೆಯಲ್ಲಿ ಮುಂದಿನ ವರ್ಷದ ಬಿತ್ತನೆಗಾಗುವಷ್ಟು ಬೀಜ ಇರುತ್ತದೆಯೋ ಆತನೇ ಆ ಊರಿನ ಶ್ರೀಮಂತ ಎಂಬುದು ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿದ್ದ ನಂಬಿಕೆಯಾಗಿತ್ತು. ಯಾಕೆಂದರೆ, ಬೆಳೆದ ಬೆಳೆಯಲ್ಲಿ ಅತ್ಯುತ್ತಮವಾದ ಬೆಳೆಯನ್ನು ಆಯ್ದು, ಚೆನ್ನಾಗಿ ಒಣಗಿಸಿ ಭದ್ರವಾಗಿ ಕಟ್ಟಿಡುವಷ್ಟು ಭದ್ರತೆ ಆತನಲ್ಲಿ ಇರಬೇಕು. ಅಲ್ಲದೆ ಆ ಕೌಶಲವೂ ಗೊತ್ತಿರಬೇಕು. ಬೆಳೆದುದನ್ನೆಲ್ಲ ಉಣ್ಣಲೋ, ಮಾರಲೋ ಬಳಸಿದರೆ ಅದು ಚಂದದ ಜೀವನ ಎಂದೆನಿಸಿಕೊಳ್ಳುತ್ತಿರಲಿಲ್ಲ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ರೈತರು ತಮ್ಮ ಜಮೀನಿನಲ್ಲಿ ಬೆಳೆಯುವ ಬೆಳೆಗಳ ಬೀಜಗಳ ಉಸ್ತುವಾರಿಯನ್ನು ಬಹುರಾಷ್ಟ್ರೀಯ ಕಂಪನಿಗಳು ವಹಿಸಿಕೊಂಡಿವೆ. ಅವರು ದುಡ್ಡು ಕೊಟ್ಟು ಖರೀದಿಸಿದ ಬೀಜಗಳನ್ನು ತಂದ ಬಳಿಕ ಆ ಬೀಜಗಳನ್ನು ಬಳಸಿಕೊಂಡು ಹೆಚ್ಚು ಇಳುವರಿ ತೆಗೆಯುವುದಷ್ಟೇ ಅವರ ಕೆಲಸವಾಗಿದೆ.

ಹಿಂದೆಲ್ಲ ಜೋಳದ ಹೊಲಗಳಲ್ಲಿ ಸಸಿಗಳ ಸುಳಿಗಳನ್ನು ತಿನ್ನುವ ಹುಳ ಕಾಣಿಸಿಕೊಂಡರೆ ರೈತರು ಹೊಲವನ್ನು ಹಾಗೆಯೇ ಬಿಟ್ಟುಬಿಡುತ್ತಿದ್ದರು. ಕೆಲವು ಸಮಯದ ಬಳಿಕ ಗಿಡಗಳ ತುದಿಸುಳಿಯು ಅಳಿದರೂ ಬುಡದಲ್ಲಿ ಮೂರ್ನಾಲ್ಕು ಸುಳಿಗಳು ಹಣಕುತ್ತಿದ್ದವು. ಮತ್ತೆ ಬೆಳೆ ಬೆಳೆದು ಹೊಲ ತುಂಬುತ್ತಿತ್ತು. ಆದರೆ ಈಗ, ಸುಳಿಗಳಿಗೆ ಹುಳ ಕಾಲಿಡುವ ಮುನ್ನವೇ ಅವುಗಳಿಗೆ ಔಷಧಿ ಸಿಂಪಡಿಸಿ ಓಡಿಸಿಬಿಡಲಾಗುತ್ತದೆ. ಬೆಳೆಯನ್ನು ರಕ್ಷಿಸಿಕೊಳ್ಳಲಾಗುತ್ತದೆ. ಒಂದು ಸೀಸನ್ನಿನ ಬೆಳೆಯನ್ನು ನಷ್ಟಮಾಡಿಕೊಂಡು ಇನ್ನೊಂದು ಸೀಸನ್ನಿನವರೆಗೆ ಕಾಯುವ ಅಗತ್ಯವೇ ಇರುವುದಿಲ್ಲ. ಅಥವಾ ಹೀಗೆ ಹೇಳಬಹುದು: ಒಂದು ಸೀಸನ್ನಿನಲ್ಲಿ ಹೊಲವನ್ನು ಹಾಗೆಯೇ ಬಿಟ್ಟು, ಇನ್ನೊಂದು ಋತುವಿನಲ್ಲಿ ಬರುವ ಬೆಳೆಗಾಗಿ ಕಾಯುವ ವ್ಯವಧಾನ ಇಂದು ಉಳಿದಿಲ್ಲ. ವ್ಯವಧಾನವಿಲ್ಲ ಎಂದಮೇಲೆ, ಗಿಡಗಳಿಗೆ ಒಮ್ಮೆ ಔಷಧಿ ಸಿಂಪಡಿಸಿದಾಗ ಹುಳ ಹೋಗದೇ ಇದ್ದರೆ ಮತ್ತೆ ಔಷಧಿ ಸಿಂಪಡಿಸುವುದು ಅನಿವಾರ್ಯವಾಗುತ್ತದೆ.

ಹಣ್ಣು ತರಕಾರಿಗಳ ತಾಜಾತನ ಹಾಗೂ ಹೊಳಪಿನ ಹಿಂದಿನ ಕಾರಣಗಳನ್ನು ಕೆದಕಿದರೆ ವಿಷದ ಗುಪ್ಪೆಯೇ ಅನಾವರಣಗೊಳ್ಳುವುದು...

